ಕನ್ನಡ ಸಾಹಿತ್ಯ ಲೋಕದಲ್ಲಿ ಉದಯೋನ್ಮುಖ ಬರಹಗಾರರಾಗಿ ಗುರುತಿಸಿಕೊಳ್ಳುತ್ತಿರುವ ಮುಸ್ತಾಫ ಕೆ.ಎಚ್. ಕೊಡಗು ಜಿಲ್ಲೆಯ ಮಾದಾಪುರದವರು. ಮಂಗಳೂರು ವಿಶ್ವವಿದ್ಯಾನಿಲಯದ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು. ಪ್ರಸ್ತುತ ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. ‘ಕಂಡದ್ದು ಕಾಡಿದ್ದು’ (ಲೇಖನ ಸಂಗ್ರಹ),‘ಹರಾಂನ ಕಥೆಗಳು’ (ಕಥಾ ಸಂಕಲನ) ಪ್ರಕಟವಾಗಿವೆ.

ಮುಸಲ್ಮಾನರಲ್ಲದಿದ್ದರೂ ‘ಹಲಾಲ್’ ಬೋರ್ಡ್ ನೇತು ಹಾಕಿ ವ್ಯಾಪಾರ ನಡೆಸುತ್ತಾರೆ. ಭಾರತದಿಂದ ವಿದೇಶಕ್ಕೆ ರಫ್ತಾಗುವ ಮಾಂಸದ ಪ್ಯಾಕ್‌ಗಳ ಮೇಲೆ ಹಲಾಲ್ ಕಡ್ಡಾಯವಾಗಿ ಇರುವಂತೆಯೂ ನೋಡಿಕೊಳ್ಳಲಾಗಿದೆ.

ಏನೇ ಇರಲಿ ನನಗೆ ಖಾನಾವಳಿ ಪದವನ್ನು ಪರಿಚಯಿಸಿದ್ದು ಬಸವರಾಜಕಟ್ಟೀಮನಿ ಅವರ ಕಾದಂಬರಿಗಳು. ಉತ್ತರ ಕರ್ನಾಟಕದ ಖಾನವಳಿಯಲ್ಲಿ, ‘ಖಾನ’ ಉರ್ದುವಿನಿಂದಲೇ ಎರವಲಾಗಿ ಬಂದಿದೆ ಎನ್ನಬಹುದು. ಕನ್ನಡ ಸಾಹಿತ್ಯದಲ್ಲಿ ಹೋಟೆಲ್ ಎಂಬುದು ವಸ್ತುವಾಗಿ ಕಥೆಗಳ, ಪ್ರಬಂಧಗಳ, ಕಾದಂಬರಿಗಳ ಸಂದರ್ಭಗಳಾಗಿ ಒಡಮೂಡಿರುವುದನ್ನು ಕಾಣಬಹುದು. ಆಧುನಿಕಪೂರ್ವ ಕನ್ನಡ ಸಾಹಿತ್ಯದ ಮಹತ್ವದ ಕಥೆಗಾರರಾದ ಪಂಜೆ ಮಂಗೇಶರಾಯರ, ‘ಕಮಲಾಪುರದ ಹೋಟ್ಲಿನಲ್ಲಿ’ ಕಥೆ ನೆನಪಾಗುತ್ತದೆ. ಶ್ರೀ ಕೃಷ್ಣ ಆಲನಹಳ್ಳಿ ಅವರ ‘ಭುಜಂಗಯ್ಯನ ದಶಾವತಾರ’ದಲ್ಲಿ ಹೋಟೆಲ್ ಉದ್ಯಮ ಭುಜಂಗಯ್ಯನ ಹತ್ತು ಅವತಾರಗಳಲ್ಲಿ ಒಂದಾಗಿ ಕಾಣಸಿಗುತ್ತದೆ. ಎಸ್.ಎಲ್. ಭೈರಪ್ಪನವರ ಆತ್ಮಕಥೆ ಭಿತ್ತಿಯಲ್ಲಿ ಬಾಲ್ಯದ ಬೈರಪ್ಪನವರು ಹೋಟೆಲ್‌ನಲ್ಲಿ ತಿಂಗಳಾನುಗಟ್ಟಲೆ ಸಪ್ಲೈಯರ್, ಕ್ಲೀನರ್ ಕೆಲಸವನ್ನು ಮಾಡಿದ ವಿವರಗಳನ್ನು, ಮಾರ್ಕ್‌ನನ್ನು, ಲೆನಿನ್‌ನ್ನು ಆ ಕಾಲದಲ್ಲಿ ಓದಿಕೊಂಡು ಹೋಟೆಲ್ ಕಾರ್ಮಿಕರ ಸಂಘವನ್ನು ಕಟ್ಟಲು ಹೊರಟು ಪೊಲೀಸರ ಅತಿಥಿಯಾದ ವಿವರಗಳನ್ನು ಓದುಗರ ಮುಂದಿಡುತ್ತಾರೆ. ಅದೇ ರೀತಿ ‘ಉಸ್ತಾದ್ ಹೋಟೆಲ್’, ‘ಪೆಪ್ಪರ್ ಆಂಡ್ ಸಾಲ್ಟ್’, ‘ದಿ ಲಂಚ್ ಬಾಕ್ಸ್’ನಂತಹ ಸಿನಿಮಾಗಳು ನನಗಂತೂ ಹೊಸ ದೃಶ್ಯಕಾವ್ಯವಾಗಿಯೇ ಕಾಣಿಸಿದವು.

ಮಾಂಸ ಪ್ರಿಯರ ಬಾಯಿ ರುಚಿಯನ್ನು ತಣಿಸುವ ಸಲುವಾಗಿಯೇ ಐದು ದಶಕಗಳ ಹಿಂದೆ ಹಾಸನ ಜಿಲ್ಲೆಯ ಕೊಣನೂರಿನ ಸಮೀಪ ಇರುವ ಕೇರಳಾಪುರದಲ್ಲಿ ಹಂಪಯ್ಯ ಶೆಟ್ಟಿ, ಬೋರೆ ಯಲ್ಲಪ್ಪ ಶೆಟ್ಟಿ, ಮತ್ತಿ ಕರಿಯಪ್ಪ ಎಂಬುವವರು ಕೇರಳಾಪುರದ ಹಿಂದೂ ಮಿಲಿಟರಿ ಹೋಟೆಲ್‌ನ್ನು ಪ್ರಾರಂಭಿಸಿದರಂತೆ. ಇಂದು ಮೈಸೂರು, ಮಂಡ್ಯ, ಹಾಸನ, ಬೆಂಗಳೂರು, ತುಮಕೂರು, ಚಿಕ್ಕಮಗಳೂರು ಭಾಗದಲ್ಲಿ 300ಕ್ಕೂ ಅಧಿಕ ಹಿಂದೂ ಮಿಲ್ಟ್ರಿ ಹೋಟೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಆಡು, ಕುರಿ, ಕೋಳಿ, ಮೀನು ಖಾದ್ಯಗಳನ್ನು ಉಣಬಡಿಸಲಾಗುತ್ತದೆ. ಮನೆಯಲ್ಲಿ ತಾಯಂದಿರು ತಯಾರಿಸಲು ಹಿಂದೇಟು ಹಾಕುವ ಕುರಿ ತಲೆ ಮಾಂಸ, ಬೋಟಿ ಮಾಂಸ, ಲಿವರ್ ಮಾಂಸ, ಕಾಲು ಸೂಪು, ಕೈಮಾ ಉಂಡೆಯಂತಹ ನಾಟಿ ಶೈಲಿಯ ಖಾದ್ಯಗಳ ಅಚ್ಚುಕಟ್ಟಾದ ತಯಾರಿಕೆ ಮತ್ತು ಹೊಟ್ಟೆ ತುಂಬುವಷ್ಟು ರಾಗಿ ಮುದ್ದೆಯನ್ನು ನುಂಗುವ ಅವಕಾಶವನ್ನು ಮಿಲಿಟರಿ ಹೋಟೆಲ್‌ಗಳು ಒದಗಿಸುತ್ತಿವೆ. ಇಂತಹ ಹೋಟೆಲ್‌ಗಳಿಗೆ ಮಾಂಸ ಪ್ರಿಯ ಗಂಡಸರೇ ಹೆಚ್ಚು ಹೋಗುತ್ತಾರೆ. ಮಿಲಿಟರಿಯಲ್ಲಿ ಸೈನಿಕರ ದೇಹ ಗಟ್ಟಿ ಮುಟ್ಟಾಗಿರಲು ಅತ್ಯುತ್ತಮ ಆಹಾರವನ್ನು ಒದಗಿಸಲಾಗುತ್ತದೆ. ಅದೇ ಬಗೆ ಆಹಾರವನ್ನು ಈ ಹೋಟೆಲುಗಳೂ ನೀಡುತ್ತವೆ ಎಂಬುದನ್ನು ಕೇರಳಾಪುರ ಹಿಂದೂ ಮಿಲಿಟರಿ ಹೋಟೆಲ್ ಎಂಬ ಹೆಸರೇ

